# ಕುಮಟಾದಲ್ಲಿ ಕೌಶಲ್ಯ ತರಬೇತಿ ಮತ್ತು ಉದ್ಯೋಗಕ್ಕಾಗಿ ಅಭ್ಯರ್ಥಿಗಳ ಆಯ್ಕೆಗೆ ಆಪ್ತ ಸಮಾಲೋಚನೆ

*********

ಕುಮಟಾ: ನಗರದ ಡಾ. ಎ.ವಿ.ಬಾಳಿಗಾ ಕಲಾ, ವಿಜ್ಞಾನ ಕಾಲೇಜು ಹಾಗೂ ದೇಶಪಾಂಡೆ ಸ್ಕಿಲ್ಲಿಂಗ್ ಸಹಯೋಗದಲ್ಲಿ 2023–24ನೇ ಸಾಲಿನ ಸ್ಕಿಲ್‌ಪ್ಲಸ್–ಜಾಬ್‌ನೆಕ್ಸ್ಟ್ ಯೋಜನೆಯಡಿ ತರಬೇತಿ ಹಾಗೂ ಉದ್ಯೋಗಕ್ಕಾಗಿ ವಿದ್ಯಾವಂತ ನಿರುದ್ಯೋಗ ಯುವಕ ಯುವತಿಯರ ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ದಿನಾಂಕ 11.12.2023, ಸೋಮವಾರ ಬೆಳಿಗ್ಗೆ 10 ಗಂಟೆಯಿಂದ ಡಾ.ಎ.ವಿ.ಬಾಳಿಗಾ ಕಲಾ ಹಾಗೂ ವಿಜ್ಞಾನ ಕಾಲೇಜು ಕುಮಟಾದಲ್ಲಿ ಅಭ್ಯರ್ಥಿಗಳ ಆಯ್ಕೆಗಾಗಿ ಆಪ್ತ ಸಮಾಲೋಚನೆಯನ್ನು ಆಯೋಜಿಸಿದೆ.

ಕನಿಷ್ಠ ಯಾವುದೇ ಪದವಿ ಹೊಂದಿದವರಿಗೆ ಬ್ಯಾಂಕಿಂಗ್, ಫೈನ್ಯಾನ್ಸ್, ಇನ್ಶೂರೆನ್ಸ್, ಹಣಕಾಸು ಹಾಗೂ ಸರ್ವೀಸ್ ಕ್ಷೇತ್ರದಲ್ಲಿ ಉದ್ಯೋಗವಕಾಶಗಳಿದ್ದು ವಿವಿಧ ಹುದ್ದೆಗಳಿಗೆ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ.

ಆಪ್ತ ಸಮಾಲೋಚನೆಯಲ್ಲಿ ಆಯ್ಕೆ ಆಗುವ ಅಭ್ಯರ್ಥಿಗಳಿಗೆ ಕುಮಟಾದಲ್ಲಿ ತರಬೇತಿಯನ್ನು ನೀಡಿ ಆಯ್ಕೆಯಾದ ಕ್ಷೇತ್ರಕ್ಕೆ ಅನುಗುಣವಾಗಿ ಶೇ.100 ಪ್ರತಿಶತ ಉದ್ಯೋಗವಕಾಶಕ್ಕೆ ಪ್ರೇರಣೆ ನೀಡಲಾಗುತ್ತದೆ. ಈ ಹಿಂದೆ ತರಬೇತಿ ಪಡೆದ ಸುಮಾರು 50ಕ್ಕೂ ಹೆಚ್ಚು ಅಭ್ಯರ್ಥಿಗಳು ಅನೇಕ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗ ಪಡೆದಿದ್ದು ಅವರ ಅನಿಸಿಕೆಯನ್ನು ಕಾರ್ಯಕ್ರಮದಲ್ಲಿ ಹಂಚಿಕೊಳ್ಳಲಿದ್ದಾರೆ.

ಈ ಕಾರ್ಯಕ್ರಮವು ಸೀಮಿತ ಕಾಲವಕಾಶದ್ದಾಗಿದ್ದು ಆಸಕ್ತರು ಸ್ವ ವಿವರ ಹಾಗೂ ವಿದ್ಯಾರ್ಹತೆಯ ದಾಖಲೆಗಳ ಪ್ರತಿಯೊಂದಿಗೆ ಆಪ್ತ ಸಮಾಲೋಚನೆಯಲ್ಲಿ ಭಾಗವಹಿಸಬಹುದಾಗಿದ್ದು ಹೆಸರನ್ನು ನೋಂದಣಿ ಮಾಡಿಕೊಳ್ಳಲು ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 7259034150, 9364015936 ಹಾಗೂ 9741519647

Dr. A.V. BALIGA COLLEGE OF ARTS & SCIENCE
KUMTA (U.K.)
(KARNATAKA STATE)

PRINCIPAL
Dr. A. V. Baliga College of
Arts & Science, KUMTA (U.K.)
(KARNATAKA STATE)